CLICK HERE TO RETURN

# ಸಿಎಸ್ಆರ್ ನೀತಿ

## ಎಂ ಸಿ ಅಂಡ್ ಎ ಲಿಮಿಟೆಡ್‌ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ನೀತಿ

### ವಿಷಯಗಳ ಪಟ್ಟಿ


| | | ಪುಟ ಸಂಖ್ಯೆ |
|---|---|---|
| 1) | ಪ್ರಸ್ತಾವನೆ | 02-02 |
| 2) | ಧ್ಯೇಯೋದ್ದೇಶಗಳು | 03-03 |
| 3) | ಸಿಎಸ್ಆರ್ ಸಮಿತಿ | 03-04 |
| 4) | ಸಿಎಸ್ಆರ್ ಚಟುವಟಿಕೆಗಳು/ಗಮನ ಹರಿಸುವ ಕ್ಷೇತ್ರಗಳು | 04-05 |
| 5) | ಪ್ರಸ್ತುತದಲ್ಲಿ ಗಮನ ಹರಿಸಿರುವುದು | 05-06 |
| 6) | ಸಿಎಸ್ಆರ್ ಯೋಜನೆಗಳು/ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಪ್ರಸ್ತಾವನೆಗಳನ್ನು ಪರಿಗಣಿಸಲು ಮತ್ತು ಅನುಮೋದಿಸಲು ಅನುಸರಿಸಬೇಕಾದ ಮಂಡಳಿಯ ಮಾರ್ಗದರ್ಶನಗಳು | 06-06 |
| | ಎ) ವಿಧಿ ವಿಧಾನಗಳು | 06-07 |
| | ಬಿ) ಮಾರ್ಗದರ್ಶನಗಳು | 07-08 |
| | ಸಿ) ಹಣ ಹಂಚಿಕೆ ಪ್ರಮಾಣ | 08-08 |
| 7) | ಯೋಜನೆ ಉಸ್ತುವಾರಿ ಕೋಶ | 08-08 |
| 8) | ಮಂಡಳಿ | 08-09 |
| 9) | ಲೆಕ್ಕಪರಿಶೋಧನೆ | 09-09 |
| 10) | ಸಮಾಪ್ತಿ | 09-09 |
| 11) | ಸಿಎಸ್ಆರ್ ಮಾರ್ಗದರ್ಶನಗಳಿಗೆ ತಿದ್ದುಪಡಿಗಳು | 09-11 |

## ಎಂ ಸಿ ಅಂಡ್ ಎ ಲಿಮಿಟೆಡ್‌ನ ಸಿಎಸ್‌ಆರ್ ನೀತಿ

**I. ಪ್ರಸ್ತಾವನೆ:**

ಭಾರತದಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಕಾರಿಕೆಯು (ಸಿಎಸ್‌ಆರ್) ಸಾಂಪ್ರದಾಯಿಕವಾಗಿ ಒಂದು ಪರೋಪಕಾರ ಕಾರ್ಯ ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಇದು ಕೆಲವೇ ಕೆಲವು ಯಶಸ್ವಿ ವ್ಯಾಪಾರ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಈಗ ಭಾರತದಲ್ಲಿನ ಅನೇಕ ಕಾರ್ಪೊರೇಟ್ ಸಂಸ್ಥೆಗಳು ಮತ್ತು ವಿದೇಶದಲ್ಲಿರುವ ಸಂಸ್ಥೆಗಳು ಸಾಮಾಜಿಕ ಅಭಿವೃದ್ಧಿ, ಪರಿಸರ ಸಂರಕ್ಷಣೆ, ಸುಸ್ಥಿರ ಪ್ರಗತಿ ಸಾಧನೆಗಾಗಿ ಮತ್ತು ಉದ್ಯಮದ ವ್ಯಾಪಾರ ವ್ಯವಹಾರ ಕಾರ್ಯಾಚರಣೆಗಳ ಪ್ರಯುಕ್ತ ಜೀವನದ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಪರಿಣಾಮ ಉಂಟು ಮಾಡುವ ಎಲ್ಲಾ ಉತ್ತರದಾಯಿಗಳ ಯೋಗಕ್ಷೇಮ ಕಾಪಾಡುವ ನಿಟ್ಟಿನಲ್ಲಿ ಇದನ್ನು ತಮ್ಮ ವ್ಯವಹಾರ ನೀತಿಯ ಅವಿಭಾಜ್ಯ ವಿಷಯವನ್ನಾಗಿ ಮಾಡಿಕೊಂಡಿವೆ. ಕೆಲವು ವರ್ಗದ ಕಂಪನಿಗಳು ಸಿಎಸ್‌ಆರ್ ಚಟುವಟಿಕೆಗಳು/ ಕಾರ್ಯಕ್ರಮಗಳಿಗೆ ಅಗತ್ಯವಾದ ಕನಿಷ್ಠ ಪ್ರಮಾಣ ಹಣದ ಹಂಚಿಕೆಯನ್ನು ಮಾಡಬೇಕು ಮತ್ತು ಸಿಎಸ್‌ಆರ್ ಬಗ್ಗೆ ಖರ್ಚು ಮಾಡುತ್ತಿರುವ ಬಗ್ಗೆ ವಾರ್ಷಿಕ ವರದಿಯಲ್ಲಿ ಪ್ರಕಟಣೆ ಮಾಡತಕ್ಕದ್ದು ಎಂದು ನೂತನ ಕಂಪನಿಗಳ ಕಾಯ್ದೆ, 2013ರಲ್ಲಿ ಕಡ್ಡಾಯಗೊಳಿಸಿದಾಗಿನಿಂದ, ಉದ್ಯಮವು ಎಲ್ಲಿಂದ ತನಗೆ ಬೇಕಾದ ಸಂಪನ್ಮೂಲಗಳನ್ನು ಪಡೆದಿದೆಯೋ ಆ “ಸಮಾಜಕ್ಕೆ ಮರಳಿ ಕೊಡುಗೆ ನೀಡುವ” ತತ್ತ್ವ ಜನಜನಿತವಾಗಿದೆ.

ಕಂಪನಿಗಳ ಕಾಯ್ದೆ, 2013, ಸಿಎಸ್‌ಆರ್‌ನ ಪರಿಕಲ್ಪನೆಯನ್ನು ಮುನ್ನೆಲೆಗೆ ಬರುವಂತೆ ಪರಿಚಯಿಸಿದೆ. ಕಂಪನಿಗಳು ತಮ್ಮ ಸಿಎಸ್‌ಆರ್ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಹಾಗೂ ಮಾಡುವ ಹಣದ ಖರ್ಚಿನ ಬಗ್ಗೆ “ಪ್ರಕಟಿಸುವುದನ್ನು ಅಥವಾ ವಿವರಿಸುವುದನ್ನು” ಕಡ್ಡಾಯಗೊಳಿಸಿದೆ. ಕಾಯ್ದೆಯ ಪರಿಚ್ಛೇದ VII ಸಿಎಸ್‌ಆರ್ ಚಟುವಟಿಕೆಗಳನ್ನು ಪಟ್ಟಿ ಮಾಡಿದೆ. ಸಿಎಸ್‌ಆರ್ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು ಸಮುದಾಯ ಕೇಂದ್ರಿತವಾಗಿರಬೇಕು ಎಂದು ಸಲಹೆ ನೀಡಿದೆ. ಈ ಸಲಹೆ ಹಾಗೂ ನಿರೂಪಣೆಗೆ ಕಾರ್ಪೊರೇಟ್ ಕಂಪನಿಗಳು ಉತ್ತಮವಾಗಿ ಸ್ಪಂದಿಸಿವೆ. ಸಾಂಸ್ಥಿತ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನೀತಿಯ ಕಡ್ಡಾಯಗೊಳಿಸಿದ ಉಪಬಂಧಗಳನ್ನು ಭಾರತೀಯ ಕಂಪನಿಗಳು ಪರಿಪಾಲಿಸುವಂತೆ ವಿಧ್ಯುಕ್ತವಾಗಿ ಜಾರಿಗೆ ತರಲಾಗಿದೆ. ಸರ್ಕಾರ ಕೈಗೊಂಡ ಈ ಸುಧಾರಣಾ ಕ್ರಮಗಳಿಗೆ ಉದ್ದಿಮೆಗಳು ಸಕಾರಾತ್ಮಕವಾಗಿ ಸ್ಪಂದಿಸಿವೆ. ಹಾಗೆಯೇ ಎಂಸಿ ಅಂಡ್ ಎ ಲಿಮಿಟೆಡ್ ಕಂಪನಿಯು ಕೂಡ, ಸಮಾಜದ ಮೇಲೆ ಸಿಎಸ್‌ಆರ್ ಉಂಟು ಮಾಡುವ ಧನಾತ್ಮಕ ಪ್ರಭಾವವನ್ನು ಮನದಟ್ಟು ಮಾಡಿಕೊಂಡಿದೆ ಮತ್ತು ತನ್ನ ವ್ಯವಹಾರ ಕಾರ್ಯಾಚರಣೆ ಸುತ್ತಲಿನ ಪ್ರದೇಶದ ಸಮುದಾಯದ ಯೋಗಕ್ಷೇಮಕ್ಕಾಗಿ ಅಲ್ಪವಾದರೂ ಕೊಡುಗೆ ನೀಡಲು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಮುಂದಾಗಿದೆ. ಹಾಗೂ ಆರ್ಥಿಕ ವರ್ಷ 2014–15ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಂಡಿರುವ ತನ್ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ ಅಳವಡಿಕೆ ಮುಖೇನ ಸಮಾಜಕ್ಕೆ ಮರಳಿ ಸೇವೆ ಸಲ್ಲಿಸುವ ಪರೋಪಕಾರಿ ಮಾರ್ಗವನ್ನು ಕೈಗೊಂಡಿದೆ. ಈ ನೀತಿಯನ್ನು ಕಾಲಕಾಲಕ್ಕೆ ಇನ್ನೂ ಹೆಚ್ಚಿನ ಸುಧಾರಣೆಗೆ ತಿದ್ದುಪಡಿ ಮಾಡಲು ಮುಕ್ತ ಅವಕಾಶ ಇರುವುದು. ಕಳೆದ ಕೆಲವು ವರ್ಷಗಳಲ್ಲಿ ಸಿಎಸ್‌ಆರ್ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಗಳಿಸಿರುವ ಅನುಭವದ ಆಧಾರದ ಮೇಲೆ ಮತ್ತು ಇತರೆ ಅನೇಕ ಯಶಸ್ವಿ ಕಂಪನಿಗಳಿಂದ ಮಾಡಿರುವ ಅನುಷ್ಠಾನದಲ್ಲಿನ ಹೊಸ ಬೆಳವಣಿಗೆಗಳನ್ನು ಪರಿಗಣಿಸಿದ ಹಿನ್ನೆಲೆಯಲ್ಲಿ ಸಿಎಸ್‌ಆರ್ ನೀತಿಯ ಉದ್ದೇಶಿತ ಧ್ಯೇಯಗಳನ್ನು ಸಾಧಿಸಲು ಸೂಕ್ತವಾಗಿ ವಿನ್ಯಾಸಗೊಳಿಸಿದ ಮತ್ತು ರೂಪಿಸಿದ ನೀತಿ ಒಂದನ್ನು ಹೊಂದಲು ಕಂಪನಿಯ ಸಿಎಸ್‌ಆರ್ ನೀತಿಯನ್ನು ತಿದ್ದುಪಡಿ ಮಾಡುವ ಜರೂರು ಉಂಟಾಗಿದೆ.

II. **ಧ್ಯೇಯೋದ್ದೇಶಗಳು:**

ನಿರ್ದಿಷ್ಟವಾಗಿ ಎಂ ಸಿ ಅಂಡ್ ಎ ನ ಕಾರ್ಯಾಚರಣೆಯಲ್ಲಿನ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಮತ್ತು ಸಾಮಾನ್ಯವಾಗಿ ಕರ್ನಾಟಕ ರಾಜ್ಯದ ಇತರೆ ಭಾಗಗಳಲ್ಲಿನ ಅವಕಾಶ ವಂಚಿತ ಮತ್ತು ಅಭಿವೃದ್ಧಿ ಹೊಂದಿರದ ಪ್ರದೇಶಗಳನ್ನು ಗುರುತಿಸುವುದು ಮತ್ತು ನೆರವು ನೀಡುವುದಕ್ಕೆ ನಿರ್ದಿಷ್ಟವಾಗಿ ಒತ್ತು ನೀಡುವುದರ ಉದ್ದೇಶಕ್ಕಾಗಿ ನೂತನ ಕಂಪನಿಗಳ ಕಾಯ್ದೆ, 2013 ಮತ್ತು ಇದರ ಅಡಿಯಲ್ಲಿ ರೂಪಿಸಿರುವ ನಿಯಮಗಳ ಅಗತ್ಯತೆಗಳನ್ನು ಪರಿಪಾಲಿಸುವ ದಿಸೆಯಲ್ಲಿ ಎಂಸಿ ಅಂಡ್ ಎನ ಸಿಎಸ್ಆರ್ ಕಾರ್ಯಕ್ರಮಗಳು/ಚಟುವಟಿಕೆಗಳಿಗೆ ಮಾರ್ಗದರ್ಶನಗಳನ್ನು ರೂಪಿಸುವುದು ಸಿಎಸ್ಆರ್ ನೀತಿಯ ಮುಖ್ಯ ಧ್ಯೇಯವಾಗಿರುವುದು.

III. **ಸಿಎಸ್ಆರ್ ಸಮಿತಿ:**

I. ಕಂಪನಿಯ ನಿರ್ದೇಶಕರ ಮಂಡಳಿಯು, ಮಂಡಳಿಯ ಮೂರು ಅಥವಾ ಅದಕ್ಕೂ ಹೆಚ್ಚು ನಿರ್ದೇಶಕರುಗಳನ್ನು ಒಳಗೊಂಡ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿ (ಸಿಎಸ್ಆರ್ ಸಮಿತಿ) ಒಂದನ್ನು ರಚಿಸತಕ್ಕದ್ದು. ಈ ನಿರ್ದೇಶಕರುಗಳ ಪೈಕಿ ಒಬ್ಬರು ಸ್ವತಂತ್ರ ನಿರ್ದೇಶಕರಾಗಿರಬೇಕು.

II. ಸಿಎಸ್ಆರ್ ಸಮಿತಿ ನಿರ್ವಹಿಸಬೇಕಾದ ಜವಾಬ್ದಾರಿ:

ಎ) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಬೇಕು ಮತ್ತು ಅದನ್ನು ಅನುಷ್ಠಾನಗೊಳಿಸಲು ಮಂಡಳಿಗೆ ಶಿಫಾರಸ್ಸು ಮಾಡಬೇಕು. ಈ ನೀತಿಯಲ್ಲಿ ಕಂಪನಿಗಳ ಕಾಯ್ದೆ, 2013ರ ವಿಧಿ 135ರ ಭಾಗವಾಗಿರುವ ಪರಿಚ್ಛೇದ-VII ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ತಿಳಿಸಿರುವಂತೆ ಕಂಪನಿಯು ಕೈಗೊಳ್ಳಬೇಕಾಗಿರುವ ಚಟುವಟಿಕೆಗಳನ್ನು ತಿಳಿಸಿರಬೇಕು;

ಬಿ) ಕಲಂ (ಎ) ರಲ್ಲಿ ಪ್ರಸ್ತಾಪಿಸಿರುವ ಚಟುವಟಿಕೆಗಳ ಬಗ್ಗೆ ಮಾಡಬೇಕಾದ ಖರ್ಚಿನ ಮೊತ್ತ ಎಷ್ಟು ಎಂಬುದನ್ನು ಶಿಫಾರಸ್ಸು ಮಾಡುವುದು; ಮತ್ತು

ಸಿ) ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯ ಬಗ್ಗೆ ಕಾಲಕಾಲಕ್ಕೆ ಮೇಲುಸ್ತುವಾರಿ ನಡೆಸುವುದು;

ಡಿ) ಕಂಪನಿಯು ಕೈಗೊಳ್ಳಲು ಉದ್ದೇಶಿಸಿದ ಯೋಜನೆಗಳು/ಕಾರ್ಯಕ್ರಮಗಳು/ಚಟುವಟಿಕೆಗಳ ಅನುಷ್ಠಾನಗೊಳಿಸುವುದನ್ನು ಖಾತರಿಪಡಿಸಲು ಪಾರದರ್ಶಕ ಮೇಲುಸ್ತುವಾರಿ ವ್ಯವಸ್ಥೆ ರೂಪಿಸುವುದು;

III. ಸಿಎಸ್ಆರ್ ಸಮಿತಿಯು ಅಗತ್ಯವೆಂದು ಭಾವಿಸಿದಾಗ ಸಭೆ ಸೇರುವುದು.

IV. ಸಿಎಸ್‌ಆರ್ ಸಮಿತಿ ಸಭೆ ನಡೆಸಲು, ಸಮಿತಿಯ ಒಟ್ಟು ಸದಸ್ಯರ ಬಲದ ಮೂರನೆ ಒಂದರಷ್ಟು ಸದಸ್ಯರು ಅಥವಾ ಇಬ್ಬರು ನಿರ್ದೇಶಕರು ಇದರಲ್ಲಿ ಯಾವುದು ಹೆಚ್ಚೋ ಅದರಂತೆ ಕೋರಂ ಇರಬೇಕು.

V. ಸಿಎಸ್‌ಆರ್ ಸಮಿತಿಯು, ಸಭೆಗ ಹಾಜರಾಗುವುದು ಅಗತ್ಯವೆಂದು ತಾನು ಪರಿಗಣಿಸಿದಂತೆ, ಸಾಮಾಜಿಕ ಸಂಸ್ಥೆಗಳ ಕಾರ್ಯನಿರ್ವಾಹಕರುಗಳು, ಸಲಹೆಗಾರರು, ಪ್ರತಿನಿಧಿಗಳನ್ನು ಮತ್ತು ಕಂಪನಿಯ ಲೆಕ್ಕಪರಿಶೋಧಕರನ್ನು ಆಹ್ವಾನಿಸಬಹುದು.

## IV. ಸಿಎಸ್‌ಆರ್ ಚಟುವಟಿಕೆಗಳು/ಗಮನ ಹರಿಸುವ ಕ್ಷೇತ್ರಗಳು

ಕಂಪನಿಗಳ ಕಾಯ್ದೆ, 2013ರ ವಿಧಿ 135ರ ಉಪಬಂಧಗಳ ಅನುಸಾರ ಸಿಎಸ್‌ಆರ್ ಅಡಿಯಲ್ಲಿ ಒಳಪಡಿಸಿಕೊಳ್ಳಬೇಕಾದ ಚಟುವಟಿಕೆಗಳನ್ನು ಕಂಪನಿಗಳ ಕಾಯ್ದೆಯ ಭಾಗವಾಗಿರುವ ಪರಿಚ್ಛೇದ VII ರಲ್ಲಿ ಪ್ರಕಟಿಸಲಾಗಿದೆ. ಕಂಪನಿಯು ತನ್ನ ಸಿಎಸ್‌ಆರ್ ಸಮಿತಿ ಶಿಫಾರಸ್ಸಿನ ಮೇರೆಗೆ ಮತ್ತು ಮಂಡಳಿಯ ಅಗತ್ಯ ಅನುಮೋದನೆಯೊಡನೆ, ಕಂಪನಿಗಳ ಕಾಯ್ದೆಯ ಪರಿಚ್ಛೇದ VII ರಲ್ಲಿ ನಿರೂಪಿಸಿರುವ, ತನ್ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಉಪಕ್ರಮಗಳ ಭಾಗವಾಗಿ ಕೆಳಕಂಡ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳಬಹುದು:–

ಚಟುವಟಿಕೆಗಳು ಈ ಕೆಳಕಂಡ ವಿಚಾರಗಳಿಗೆ ಸಂಬಂಧಿಸಿರುವವು:

i. ನೈರ್ಮಲ್ಯ ಪ್ರವರ್ಧನೆಗಾಗಿ ಮತ್ತು ಸುರಕ್ಷಿತ ಕುಡಿಯುವ ನೀರು ದೊರೆಯುವಂತೆ ಮಾಡಲು ಕೇಂದ್ರ ಸರ್ಕಾರ ಸ್ಥಾಪಿಸಿರುವ ಸ್ವಚ್ಛ ಭಾರತ ಅಭಿಯಾನಕ್ಕೆ ವಂತಿಗೆ ನೀಡುವುದು, ಆರೋಗ್ಯ ಕೆಡದಂತೆ ಮುಂಜಾಗ್ರತ ರಕ್ಷಣೆ ಒದಗಿಸುವುದು ಹಾಗೂ ನೈರ್ಮಲ್ಯ ಕಾಪಾಡುವುದು ಸೇರಿದಂತೆ ಆರೋಗ್ಯ ವರ್ಧನೆ ಕ್ರಮ ಕೈಗೊಳ್ಳುವುದು, ಹಸಿವು, ಬಡತನ ಮತ್ತು ಅಪೌಷ್ಠಿಕತೆ ನಿರ್ಮೂಲನೆ;

ii. ವಿಶೇಷ ಶಿಕ್ಷಣ ಸೇರಿದಂತೆ ಶಿಕ್ಷಣ ಪ್ರವರ್ಧನೆ ಮತ್ತು ವಿಶೇಷವಾಗಿ ಮಕ್ಕಳು, ಮಹಿಳೆಯರು, ವಯಸ್ಕರು ಮತ್ತು ವಿಶೇಷ ಚೇತನರ ಔದ್ಯೋಗಿಕ ಕೌಶಲ್ಯ ಹೆಚ್ಚಿಸಿ ಉದ್ಯೋಗಸ್ಥರನ್ನಾಗಿಸುವುದು ಮತ್ತು ಜೀವನಮಟ್ಟ ಸುಧಾರಿಸುವ ಯೋಜನೆಗಳ ಪ್ರವರ್ಧನೆ;

iii. ಲಿಂಗ ಸಮಾನತೆ ಉಂಟು ಮಾಡುವುದು, ಮಹಿಳೆಯರ ಸಬಲೀಕರಣ, ಮಹಿಳೆಯರು ಮತ್ತು ಅನಾಥರಿಗೆ ಗೃಹಗಳು ಮತ್ತು ಹಾಸ್ಟೆಲ್‌ಗಳ ಸ್ಥಾಪನೆ; ಹಿರಿಯ ನಾಗರಿಕರಿಗೆ ವೃದ್ಧಾಶ್ರಮಗಳು, ಡೇ ಕೇರ್ ಸೆಂಟರ್‌ಗಳು ಮತ್ತು ಅಂತಹ ಇತರೆ ಸೌಲಭ್ಯಗಳನ್ನು ಒದಗಿಸುವುದು ಮತ್ತು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳು ಎದುರಿಸುತ್ತಿರುವ ಅಸಮಾನತೆ ಕಡಿಮೆಗೊಳಿಸಲು ಕ್ರಮಗಳನ್ನು ಕೈಗೊಳ್ಳುವುದು;

iv. ಪರಿಸರ ಸುಸ್ಥಿರತೆ, ಜೀವಿಪರಿಸರ ಸಮತೋಲನ ಕಾಪಾಡುವುದು, ಸಸ್ಯ ಸಂಪತ್ತು ಮತ್ತು ಪ್ರಾಣಿಸಂಕುಲ ರಕ್ಷಣೆ, ಪ್ರಾಣಿಗಳ ಕ್ಷೇಮಾಭಿವೃದ್ಧಿ, ಕೃಷಿ ಅರಣ್ಯೀಕರಣ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಮಣ್ಣು, ಗಾಳಿ ಮತ್ತು ನೀರಿನ ಗುಣಮಟ್ಟ ಪರಿಪಾಲನೆ, ಮತ್ತು ಗಂಗಾ ನದಿ ಪುನಶ್ಚೇತನಕ್ಕಾಗಿ ಕೇಂದ್ರ ಸರ್ಕಾರ ಸ್ಥಾಪಿಸಿರುವ ಸ್ವಚ್ಛ ಗಂಗಾ ನಿಧಿಗೆ ವಂತಿಗೆ ನೀಡುವುದು;

v. ಐತಿಹಾಸಿಕ ಮಹತ್ವದ ಕಟ್ಟಡಗಳು ಮತ್ತು ಸ್ಥಳಗಳ ಜೀರ್ಣೋದ್ಧಾರ ಮತ್ತು ಕಲಾಕೃತಿಗಳ ರಕ್ಷಣೆ; ಗ್ರಂಥಾಲಯಗಳ ಸ್ಥಾಪನೆ; ಸಾಂಪ್ರದಾಯಿಕ ಕಲೆಗಳು ಮತ್ತು ಕರಕುಶಲ ವಸ್ತುಗಳ ಪ್ರವರ್ಧನೆ ಮತ್ತು ಅಭಿವೃದ್ಧಿ ಒಳಗೊಂಡಂತೆ ರಾಷ್ಟ್ರೀಯ ಸ್ಮಾರಕ, ಕಲೆ ಮತ್ತು ಸಂಸ್ಕೃತಿಯ ಸಂರಕ್ಷಣೆ;

vi. ಸಶಸ್ತ್ರ ಪಡೆಗಳ ಯೋಧರು, ಯುದ್ಧದಲ್ಲಿ ಮಡಿದ ಯೋಧರ ವಿಧವೆಯರು ಮತ್ತು ಅವರ ಅವಲಂಬಿತರ ಅನುಕೂಲಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದು;

vii. ಗ್ರಾಮೀಣ ಕ್ರೀಡೆಗಳು, ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದಿರುವ ಕ್ರೀಡೆಗಳು, ಪ್ಯಾರಾಲಿಂಪಿಂಗ್ ಕ್ರೀಡೆಗಳು ಮತ್ತು ಒಲಂಪಿಕ್ ಕ್ರೀಡೆಗಳ ಪ್ರವರ್ಧನೆಗೆ ತರಬೇತಿ ನೀಡಿಕೆ;

viii. ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಗೆ ಮತ್ತು ಅಥವಾ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಪರಿಹಾರ ಮತ್ತು ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಸ್ಥಾಪಿಸಿರುವ ಯಾವುದೇ ಇತರೆ ನಿಧಿಗೆ ದೇಣಿಗೆ ನೀಡುವುದು;

ix. ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿರುವ ಶೈಕ್ಷಣಿಕ ಸಂಸ್ಥೆಗಳ ಒಳಗೆ ಇರುವ ತಂತ್ರಜ್ಞಾನ ಪೋಷಣೆ ಕೇಂದ್ರಗಳಿಗೆ ದೇಣಿಗೆ ನೀಡುವುದು ಅಥವಾ ಹಣ ಒದಗಿಸುವುದು;

x. ಗ್ರಾಮೀಣಾಭಿವೃದ್ಧಿ ಯೋಜನೆಗಳು.

## V. ಪ್ರಸ್ತುತದಲ್ಲಿ ಗಮನ ಹರಿಸುವುದು:

ಪ್ರಾರಂಭಿಕವಾಗಿ, ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ VII ರಲ್ಲಿ ಒಳಪಟ್ಟಿರುವ ಚಟುವಟಿಕೆಗಳ ರೂಪದಲ್ಲಿರುವ ಈ ಕೆಳಕಂಡ ಚಟುವಟಿಕೆಗಳ ಬಗ್ಗೆ ಕಂಪನಿಯು ಗಮನ ಹರಿಸುವುದು:

ಎ) ಪ್ರಮುಖವಾಗಿ ಸರ್ಕಾರದ ವಲಯದ ಶಾಲೆಗಳು/ಶಿಕ್ಷಣ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದೂ ಸೇರಿದಂತೆ ಶಿಕ್ಷಣದ ಪ್ರವರ್ಧನೆ; ಆದ್ಯನೀಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಎಸ್‌ಎಸ್‌ಎಲ್‌ಸಿ/ಪಿಯುಸಿ/ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಹೆಚ್ಚಿಸುವ ಔದ್ಯೋಗಿಕ ಕೌಶಲ್ಯ ಪ್ರವರ್ಧನೆ;

ಬಿ) ಸರ್ಕಾರಿ ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿನ ಶಾಲಾ ಮಕ್ಕಳ ಆರೋಗ್ಯ ರಕ್ಷಣೆ, ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವುದು ಮತ್ತು ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು; ಶಾಲೆಗಳು/ಕಾಲೇಜುಗಳಲ್ಲಿ ಗ್ರಂಥಾಲಯಗಳು/ಮಾಹಿತಿ ಕೇಂದ್ರಗಳು/ಕೆರೀರ್ ಕೌನ್ಸೆಲಿಂಗ್ ಸೆಂಟರ್‌ಗಳ ಸೌಲಭ್ಯ ಒದಗಿಸುವುದು;

ಸಿ) ಪರಿಸರ ಸಂರಕ್ಷಣೆ ಮಾಡುವುದು, ಜೀವಿ ಪರಿಸರ ಸಮತೋಲನ ಕಾಪಾಡುವುದು, ಸಸ್ಯ ಸಂಪತ್ತು ಮತ್ತು ಪ್ರಾಣಿಸಂಕುಲ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಅರಿವು ಮೂಡಿಸುವಿಕೆ ಶಿಬಿರಗಳನ್ನು ನಡೆಸುವ ಮೂಲಕ ಇಂಥ ಚಟುವಟಿಕೆಗಳ ಪ್ರವರ್ಧನೆ ಮಾಡುವುದು ಮತ್ತು ಈ ಕ್ಷೇತ್ರಗಳಲ್ಲಿ ಕಾರ್ಯನಿರತವಾಗಿರುವ ಎನ್‌ಜಿಓಗಳು ಮತ್ತು ಶಿಕ್ಷಣ ಸಂಸ್ಥೆಗಳ ಮೂಲಕ ಈ ವಿಚಾರಗಳ ಬಗ್ಗೆ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸುವುದು;

ಡಿ) ಐತಿಹಾಸಿಕ ಮಹತ್ವದ ಕಟ್ಟಡಗಳು ಮತ್ತು ಸ್ಥಳಗಳ ಜೀರ್ಣೋದ್ಧಾರ ಮತ್ತು ಕಲಾಕೃತಿಗಳ ರಕ್ಷಣೆ; ಗ್ರಂಥಾಲಯಗಳ ಸ್ಥಾಪನೆ; ಸಾಂಪ್ರದಾಯಿಕ ಕಲೆಗಳು ಮತ್ತು ಕರಕುಶಲ ವಸ್ತುಗಳ ಪ್ರವರ್ಧನೆ ಮತ್ತು ಅಭಿವೃದ್ಧಿ ಒಳಗೊಂಡಂತೆ ರಾಷ್ಟ್ರೀಯ ಸ್ಮಾರಕ, ಕಲೆ ಮತ್ತು ಸಂಸ್ಕೃತಿಯ ಸಂರಕ್ಷಣೆ;

ಇ) ಗ್ರಾಮೀಣಾಭಿವೃದ್ಧಿ ಪ್ರವರ್ಧನೆಕಾರಿಯಾದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಕೈಗೊಳ್ಳುವುದು.

ನಿರ್ದೇಶಕರ ಮಂಡಳಿಯು ಸಿಎಸ್ಆರ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ VII ಮತ್ತು ಇದರಡಿ ರೂಪಿಸಿರುವ ನಿಯಮಗಳು ಮತ್ತು ಮಾರ್ಗದರ್ಶನಗಳ ಅನುಸಾರ ಹಾಗೂ ಕಾಲಕಾಲಕ್ಕೆ ಮಾರ್ಪಾಡು ಮಾಡಿದಂತೆ ಸಿಎಸ್ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯವಾದಲ್ಲಿ ಬೇರೆ ಕಂಪನಿಗಳ ಜೊತೆ ಸಹಭಾಗಿತ್ವ ಮಾಡಿಕೊಳ್ಳುವ ಬಗ್ಗೆ ತೀರ್ಮಾನಿಸಬಹುದಾಗಿರುತ್ತದೆ.

## VI. ಸಿಎಸ್ಆರ್ ಯೋಜನೆಗಳು/ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಪ್ರಸ್ತಾವನೆಗಳನ್ನು ಪರಿಗಣಿಸಲು ಮತ್ತು ಅನುಮೋದನೆಗೆ ಅನುಸರಿಸಬೇಕಾದ ಮಂಡಳಿಯ ಮಾರ್ಗದರ್ಶನಗಳು:

ಕಂಪನಿಯ ನಿರ್ದೇಶಕರ ಮಂಡಳಿಯು ಸಿಎಸ್ಆರ್ ಸಮಿತಿ ಶಿಫಾರಸ್ಸಿನ ಮೇರೆಗೆ ಕಾಲಕಾಲಕ್ಕೆ ಸಿಎಸ್ಆರ್ ಉಪಕ್ರಮಗಳ ಅಡಿಯಲ್ಲಿ ಕಂಪನಿ ಕೈಗೊಳ್ಳಬೇಕಾಗಿರುವ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳನ್ನು ನಿರ್ಧರಣೆ ಮಾಡಬಹುದು/ಅನುಮೋದಿಸಬಹುದಾಗಿರುತ್ತದೆ. ಆದರೂ, ಕೈಗೊಂಡ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ VII ಅಥವಾ ಯಾವುದೇ ಇತರೆ ಸಂಬಂಧಪಟ್ಟ ಉಪಬಂಧಗಳಿಗೆ ಸಂಬಂಧಿಸಿರುವುದೇ ಮತ್ತು ಮಂಡಳಿಯ ಚಟುವಟಿಕೆಗಳ ಪರಿಧಿಯೊಳಗೆ ಬರುವುದೇ ಎಂಬುದನ್ನು ಮಂಡಳಿಯು ಖಾತರಿಪಡಿಸಿಕೊಳ್ಳಬೇಕು.

ಸಿಎಸ್ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳನ್ನು ಕೈಗೊಳ್ಳುವಾಗ ಸ್ಥಳೀಯ ಪ್ರದೇಶಕ್ಕೆ ಅಥವಾ ಕಂಪನಿಯ ಕಾರ್ಯಾಚರಣೆ ಪ್ರದೇಶಕ್ಕೆ ಮೊದಲ ಆದ್ಯತೆ ಕೊಡತಕ್ಕದ್ದು. ಯಾವುದೇ ಗುರುತಿಸಿದ ಯೋಜನೆ ಅಥವಾ ಕಾರ್ಯಕ್ರಮ ಅಥವಾ ಚಟುವಟಿಕೆಗಳಿಗಾಗಿ ಕಾರ್ಯಾಚರಣೆಯ ಪ್ರದೇಶವನ್ನು ಸಿಎಸ್ಆರ್ ಸಮಿತಿ ಶಿಫಾರಸ್ಸಿನ ಮೇಲೆ ನಿರ್ದೇಶಕರ ಮಂಡಳಿ ಅಂತಿಮಗೊಳಿಸತಕ್ಕದ್ದು.

### ಎ) ವಿಧಿವಿಧಾನಗಳು:

ಸಿಎಸ್ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವ ವಿಧಿವಿಧಾನಗಳನ್ನು ಸಿಎಸ್ಆರ್ ಸಮಿತಿ ಶಿಫಾರಸ್ಸಿನ ಮೇರೆಗೆ ನಿರ್ದೇಶಕರ ಮಂಡಳಿಯು ನಿರ್ಧರಣೆ ಮಾಡುವುದು. ಸದರಿ ವಿಧಿವಿಧಾನಗಳನ್ನು ಈ ಕೆಳಕಂಡಂತೆ ವಿಸ್ತೃತವಾಗಿ ಚಿತ್ರಿಸಲಾಗಿದೆ.

ಎ) ಯಾವುದೇ ಯೋಜನೆ ಅಥವಾ ಕಾರ್ಯಕ್ರಮ ಅಥವಾ ಚಟುವಟಿಕೆಗಳಿಗೆ ಮತ್ತು/ಅಥವಾ ಇತರೆ ಪ್ರಾಸಂಗಿಕ ಅಥವಾ ಪೂರಕ ವಿಚಾರಗಳಿಗೆ ಸಂಬಂಧಿಸಿದಂತೆ ಒಳಗೊಂಡಿರಬೇಕಾದ ಕನಿಷ್ಠ ಅರ್ಹತಾ ಮಾನದಂಡ ಮತ್ತು ಅಗತ್ಯವಾದ ಮಾರ್ಗದರ್ಶನಗಳನ್ನು ಸಿಎಸ್‌ಆರ್ ಸಮಿತಿಯ ಶಿಫಾರಸ್ಸಿನ ಮೇರೆಗೆ ನಿರ್ದೇಶಕರ ಮಂಡಳಿ ಅಂತಿಮಗೊಳಿಸುವುದು.

ಬಿ) ಸಿಎಸ್‌ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳ ಮೇಲುಸ್ತುವಾರಿ ನೋಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸಿಎಸ್‌ಆರ್ ಸಮಿತಿಯು ಕಾಲಕಾಲಕ್ಕೆ ನಿಯಮಗಳು/ ಮಾರ್ಗದರ್ಶನಗಳನ್ನು ರೂಪಿಸತಕ್ಕದ್ದು.

ಸಿ) ಸಿಎಸ್‌ಆರ್ ಸಮಿತಿಯು, ಕಂಪನಿಗಳ ಕಾಯ್ದೆ, 2013 ಅಥವಾ ಇದರಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಅಥವಾ ಬೇರೆ ರೀತಿಯಲ್ಲಿ ಮಾಡಬೇಕಾಗಿರುವ ಅಥವಾ ಅನುಸರಿಸಬೇಕಾಗಿರುವ ಯಾವುದೇ ಕಾರ್ಯ, ಕರ್ತವ್ಯ, ಕೆಲಸ ಅಥವಾ ವಸ್ತು ಇತ್ಯಾದಿಯನ್ನು ಮಾಡಲು ನಿರ್ಣಯಗಳನ್ನು ಅಂಗೀಕರಿಸುವ ಮೂಲಕ ವ್ಯವಸ್ಥಾಪಕ ನಿರ್ದೇಶಕರು ಅಥವಾ ಕಂಪನಿಯ ಯಾವುದೇ ಇತರೆ ಅಧಿಕಾರಿಗೆ ವಹಿಸಬಹುದಾಗಿದೆ ಅಥವಾ ಅಧಿಕಾರ ನೀಡಬಹುದಾಗಿರುತ್ತದೆ. ಅಂತಹ ನಿರ್ಣಯದ ಅನುಸಾರ ಸೂಚಿತ ಅಂತಹ ವ್ಯಕ್ತಿ ಮಾಡಿದ ಅಂತಹ ಯಾವುದೇ ಕಾರ್ಯ ಕೆಲಸ, ಮತ್ತು ಕರ್ತವ್ಯ ಅಥವಾ ವಸ್ತುಗಳು ಇತ್ಯಾದಿಯು ಸಮಿತಿಯೇ ಮಾಡಿದ್ದು ಎಂಬ ಅರ್ಥದ ಭಾವವನ್ನು ಹೊಂದಿರುವುದು.

**ಬಿ) ಮಾರ್ಗದರ್ಶನಗಳು:**

1) ಎಲ್ಲಾ ಅರ್ಹ ಸಂಘಟನೆಗಳು/ಸಂಸ್ಥೆಗಳು/ಟ್ರಸ್ಟ್‌ಗಳು/ಎಒಪಿಗಳು/ಕಂಪನಿಗಳು/ಮಂಡಳಿಗಳು ಮತ್ತು ನಿಗಮಗಳು/ಸರ್ಕಾರದ ಸಂಸ್ಥೆಗಳು/ರಾಜ್ಯ ಮತ್ತು ಜಿಲ್ಲೆ/ತಾಲ್ಲೂಕು/ನಗರ/ಪಟ್ಟಣ ಪ್ರಾಧಿಕಾರಗಳು/ ಎನ್‌ಜಿಒಗಳು ಸಿಎಸ್‌ಆರ್ ಅಡಿಯಲ್ಲಿ ನೆರವು ಪಡೆಯಲು ಅರ್ಜಿ ಸಲ್ಲಿಸಬಹುದು.

2) ಸಿಎಸ್‌ಆರ್ ಅಡಿಯಲ್ಲಿ ನೆರವು ಪಡೆಯಲು ಸಲ್ಲಿಸುವ ಪ್ರಸ್ತಾವನೆ/ಮನವಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರಬೇಕು.
   - ಎ) ಮನವಿ ಪತ್ರ
   - ಬಿ) ಯೋಜನೆ/ಗಳ/ಚಟುವಟಿಕೆಗಳ ಹೆಸರು ಜೊತೆಗೆ ವಿವರ
   - ಸಿ) ಯೋಜನೆ/ಚಟುವಟಿಕೆಯ ನಿರೀಕ್ಷಿತ ವೆಚ್ಚ
   - ಡಿ) ಬೈಲಾಗಳು/ಟ್ರಸ್ಟ್ ಪತ್ರ/ಸಂಸ್ಥಾಪನಾ ಪತ್ರ ಅಥವಾ ಸಂಬಂಧಪಟ್ಟ ಸಂಸ್ಥೆಗೆ ಅನ್ವಯವಾಗುವ ಅಂತಹ ಇತರೆ ಬೈಲಾಗಳ ಪ್ರತಿ. ಸಿಎಸ್‌ಆರ್ ಅಡಿಯಲ್ಲಿ ನೆರವು ಪಡೆಯಲು ಇಚ್ಚಿಸುವ ಟ್ರಸ್ಟ್ ಲಾಭ ಗಳಿಕೆ ಉದ್ದೇಶವಿಲ್ಲದೆ/ಟ್ರಸ್ಟಿಗಳಿಗೆ ಲಾಭದ ಪಾಲಿನ ಹಂಚಿಕೆ ವ್ಯವಸ್ಥೆ ಹೊಂದಿರದೆ ಸ್ಥಾಪನೆಯಾಗಿರಬೇಕು.
   - ಇ) ಸಂಸ್ಥೆಯು ಎಂಸಿ ಅಂಡ್ ಎ ಲಿ ನ ಸಿಎಸ್‌ಆರ್ ನೀತಿಯ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧವಾಗಿರುವುದಾಗಿ ತಿಳಿಸಲ್ಪಟ್ಟ ಮುಚ್ಚಳಿಕೆ ಪತ್ರ ಸಲ್ಲಿಸಬೇಕು.

3) ನೆರವಿಗಾಗಿ ಕೋರಿ ಸಲ್ಲಿಸಲಾದ ಅರ್ಜಿ/ಪ್ರಸ್ತಾವನೆಯನ್ನು ಸಂಬಂಧಪಟ್ಟ ಸಂಸ್ಥೆಯ ಅಧಿಕಾರ ವ್ಯಾಪ್ತಿಯ ಉನ್ನತ ಅಧಿಕಾರಿಯು ಕ್ರಮವಾಗಿ ಶಿಫಾರಸ್ಸು ಮಾಡಿರಬೇಕು.

4) ಪ್ರತಿಯೊಂದು ಪ್ರಸ್ತಾವನೆಯು ಸಿಎಸ್‌ಆರ್ ಯೋಜನೆಗಳು/ಕಾರ್ಯಕ್ರಮಗಳು/ಚಟುವಟಿಕೆಗಳ ಚೌಕಟ್ಟಿನ ಒಳಗಿರಬೇಕು.

5) ಸ್ವೀಕರಿಸಲಾದ ಪ್ರಸ್ತಾವನೆಗಳು/ಅರ್ಜಿಗಳು, ಕಂಪನಿಯ ಸಿಎಸ್‌ಆರ್ ನೀತಿಯ ವ್ಯಾಪ್ತಿ ಒಳಗೆ ಸಮಗ್ರ ಅರ್ಹತೆ ಹೊಂದಿರುವುದೇ ಎಂಬುದನ್ನು ಪರಿಗಣಿಸಲು, ಕಂಪನಿಯ ಯೋಜನಾ ಮೇಲುಸ್ತುವಾರಿ ಕೋಶದಿಂದ ಪೂರ್ವಭಾವಿ ಪರೀಕ್ಷೆ ಮಾಡುವುದಕ್ಕೆ ಒಳಪಟ್ಟಿರುವುದು.

6) ಸಿಎಸ್‌ಆರ್ ಅಡಿಯಲ್ಲಿನ ಕಾರ್ಯಕ್ರಮಗಳು/ಚಟುವಟಿಕೆಗಳಿಗೆ ಮಂಜೂರಾದ ನೆರವಿನ ಸಂಬಂಧ ಅನ್ವಯವಾಗುವೆಡೆಗಳಲ್ಲಿ ಎಂಸಿ ಅಂಡ್ ಎ ಹೆಸರಿನಲ್ಲಿ ದಾಖಲೆಗಳನ್ನು ರೂಪಿಸಬೇಕು ಮತ್ತು ಕಂಪನಿ ಒದಗಿಸಿದ ಉಪಕರಣಗಳು/ಸಲಕರಣೆಗಳು/ಸಾಮಗ್ರಿಗಳ ಮೇಲೆ ಕಂಪನಿಯ ಅಗತ್ಯವಾದ ಬಿಲ್ಲೆಗಳು/ ಲೋಗೊ ಅನ್ನು ಹಾಕಿರಬೇಕು/ಪಡಿಯಚ್ಚು ಮಾಡಿರಬೇಕು.

7) ಸಿಎಸ್‌ಆರ್ ಅಡಿಯಲ್ಲಿ ಕಂಪನಿ ಒದಗಿಸಿದ ನೆರವು ಅಥವಾ ಬಿಡುಗಡೆ ಮಾಡಿದ ಹಣವು, ಯೋಜನಾ ಮೇಲುಸ್ತುವಾರಿ ಕೋಶದಿಂದ ಪರಿಶೀಲನೆಗೆ ಒಳಪಟ್ಟಿರುವುದು.

8) ಸಿಎಸ್‌ಆರ್ ಅಡಿಯಲ್ಲಿ ಒದಗಿಸಿದ ನೆರವಿನ ಬಗ್ಗೆ ನೆರವು ಪಡೆದ ಸಂಸ್ಥೆಯು ಅದನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಉಪಯೋಗ ಪ್ರಮಾಣಪತ್ರ ಸಲ್ಲಿಸಬೇಕು ಮತ್ತು ಹಣ ಪಾವತಿ ಪಡೆಯುವ ಮುನ್ನ ಸಂಬಂಧಪಟ್ಟ ಸಂಸ್ಥೆಯು ಈ ಸಂಬಂಧವಾಗಿ ಮುಚ್ಚಳಿಕೆ ಪತ್ರವನ್ನು ಸಲ್ಲಿಸಬೇಕು.

9) ಸಂಬಂಧಪಟ್ಟ ಸಂಸ್ಥೆಯು ಯಾವ ಉದ್ದೇಶಕ್ಕಾಗಿ ಹಣವನ್ನು/ನೆರವನ್ನು ಮಂಜೂರು ಮಾಡಲಾಗಿರುವುದೋ ಅದಕ್ಕೆ ಪಾರದರ್ಶಕ ರೀತಿಯಲ್ಲಿ ಬಳಕೆ ಮಾಡಬೇಕು.

**ಸಿ) ಹಣ ಹಂಚಿಕೆ ಪ್ರಮಾಣ:**

ಕಂಪನಿಯು ಪ್ರತಿ ವರ್ಷದ ತನ್ನ ಲಾಭವನ್ನು ಪರಿಗಣನೆಗೆ ತೆಗೆದುಕೊಂಡು, ಕಂಪನಿಗಳ ಕಾಯ್ದೆ, 2013ರ ವಿಧಿ 135ರ ಉಪಬಂಧಗಳ ಅನ್ವಯ, ಸಿಎಸ್‌ಆರ್ ಅಡಿಯಲ್ಲಿ ಯೋಜನೆಗಳು/ಕಾರ್ಯಕ್ರಮಗಳು/ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಬಜೆಟ್ ವ್ಯವಸ್ಥೆ ಮಾಡುವುದು, ಅಂದರೆ ಕಂಪನಿಯು ಸಿಎಸ್‌ಆರ್ ಚಟುವಟಿಕೆಗಳ ಅಡಿಯಲ್ಲಿ ಪ್ರತಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮೂರು ವರ್ಷಗಳ ಅವಧಿಯ ಸರಾಸರಿ ನಿವ್ವಳ ಲಾಭಗಳ ಕನಿಷ್ಠ 2% ಹಣವನ್ನು ಖರ್ಚು ಮಾಡಬಹುದಾಗಿರುತ್ತದೆ.

## VII. ಯೋಜನೆ ಉಸ್ತುವಾರಿ ಕೋಶ:

ಕಂಪನಿಯು ಎರಡರಿಂದ ಮೂರು ಮಂದಿ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಯೋಜನಾ ಉಸ್ತುವಾರಿ ಕೋಶವನ್ನು ಕಂಪನಿ ರಚಿಸಬೇಕು. ಕಂಪನಿಯು ಮಂಜೂರು ಮಾಡಿದ ಯೋಜನೆಗಳು/ಕಾರ್ಯಕ್ರಮಗಳು/ ಚಟುವಟಿಕೆಗಳನ್ನು ಮತ್ತು ಇವುಗಳಿಗೆ ಸಿಎಸ್‌ಆರ್ ಅಡಿಯಲ್ಲಿ ಬಿಡುಗಡೆ ಮಾಡಿದ ಹಣವನ್ನು ಈ ಕೋಶವು ನಿಯಮಿತವಾದ ಕಾಲದ ಅಂತರಗಳಲ್ಲಿ ಮೇಲುಸ್ತುವಾರಿ ಮಾಡುವುದು ಮತ್ತು ಅನುಷ್ಠಾನದಲ್ಲಿ ಆಗಿರುವ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಪರಿಗಣಿಸಿ ತನ್ನ ವರದಿಯನ್ನು ಸಿಎಸ್‌ಆರ್ ಸಮಿತಿಗೆ ಸಲ್ಲಿಸುವುದು. ಸಮಿತಿಯು ಇದರ ಹಿನ್ನೆಲೆಯಲ್ಲಿ ನಿಯತಕಾಲಿಕ ಸ್ಥಿತಿಗತಿ ವರದಿಯನ್ನು ಮಂಡಳಿಗೆ ಸಲ್ಲಿಸುವುದು.

## VIII. ಮಂಡಳಿ:

ಮಂಡಳಿಯು, ಸಿಎಸ್‌ಆರ್ ಸಮಿತಿಯ ಶಿಫಾರಸ್ಸುಗಳನ್ನು ಕ್ರಮವಾಗಿ ಪರಿಗಣಿಸಿ, ಕಂಪನಿಯ ಸಿಎಸ್‌ಆರ್ ನೀತಿಯನ್ನು ಅನುಮೋದಿಸತಕ್ಕದ್ದು ಮತ್ತು ನೀತಿಯ ವಿಷಯಗಳನ್ನು ಕಂಪನಿಗಳ (ಸಾಂಸ್ಥಿಕ ಸಾಮಾಜಿಕ

ಹೊಣೆಗಾರಿಕೆ) ನಿಯಮಗಳು, 2014ರ ಅನ್ವಯ ತಿಳಿಸಿರುವಂತೆ ಅಂತಹ ವಿವರಗಳನ್ನು ತನ್ನ ವರದಿಯಲ್ಲಿ ಸದಸ್ಯರುಗಳಿಗೆ ತಿಳಿಸತಕ್ಕದ್ದು ಹಾಗೂ ಕಂಪನಿಯ ವೆಬ್‌ಸೈಟ್‌ನಲ್ಲಿಯೂ ಸಹ ಅದನ್ನು ಪ್ರಕಟಿಸತಕ್ಕದ್ದು.

ಸಿಎಸ್‌ಆರ್ ನೀತಿಯಲ್ಲಿ ಸೇರ್ಪಡೆ ಮಾಡಿರುವ ಚಟುವಟಿಕೆಗಳನ್ನು ನೀತಿಯ ಸಮಗ್ರ ಚೌಕಟ್ಟಿನ ಒಳಗೆ, ಮತ್ತು ಈ ಸಂಬಂಧದ ಕಂಪನಿಗಳ ಕಾಯ್ದೆಯ ಉಪಬಂಧಗಳ ಅನುಸಾರ ಸಂಬಂಧಪಟ್ಟ ಆರ್ಥಿಕ ವರ್ಷದ ಅವಧಿಯಲ್ಲಿ ಕಂಪನಿಯು ಅವುಗಳ ಅನುಷ್ಠಾನ ಕೈಗೊಂಡಿದೆಯೇ ಎಂಬುದನ್ನು ಸಹ ಮಂಡಳಿ ಖಾತರಿಪಡಿಸಿಕೊಳ್ಳಬೇಕು.

## IX. **ಲೆಕ್ಕಪರಿಶೋಧನೆ:**

ಪ್ರತ್ಯೇಕ ಯೋಜನಾ ಉಸ್ತುವಾರಿ ಕೋಶದಿಂದ ಚಟುವಟಿಕೆಗಳ ನಿರಂತರ ಉಸ್ತುವಾರಿ ನೋಡಿಕೊಳ್ಳುವುದರ ಜೊತೆಗೆ, ಎಲ್ಲಾ ಸಿಎಸ್‌ಆರ್ ಚಟುವಟಿಕೆಗಳು ಮತ್ತು ಅವುಗಳ ಬಗ್ಗೆ ಮಾಡಿರುವ ಖರ್ಚುಗಳು ಕಂಪನಿಯ ಲೆಕ್ಕಪರಿಶೋಧಕ/ರು ಗಳಿಂದ ಲೆಕ್ಕಪರಿಶೋಧನೆ ಮಾಡುವುದಕ್ಕೆ ಒಳಪಟ್ಟಿರುವವು.

## X. **ಸಮಾಪ್ತಿ:**

ಮೇಲೆ ತಿಳಿಸಿರುವಂತೆ ಕಂಪನಿಯ ಸಿಎಸ್‌ಆರ್ ನೀತಿಯು ಕೇವಲ ದೃಷ್ಟಾಂತ ರೂಪದ್ದಾಗಿರುವುದು ಮತ್ತು ಕಂಪನಿಗಳ ಕಾಯ್ದೆಯ ಸಮಗ್ರ ಉಪಬಂಧಗಳು ಮತ್ತು ಅದರಡಿಯಲ್ಲಿ ರೂಪಿಸಿರುವ ನಿಯಮಗಳ ಒಳಗೆ ಮತ್ತು ಬದಲಾಗುವ ಸಮಯದ ಅಗತ್ಯದ ಅನುಸಾರ ಅವುಗಳನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವುದು.

## XII. **ಸಿಎಸ್‌ಆರ್ ಮಾರ್ಗದರ್ಶನಗಳಿಗೆ ತಿದ್ದುಪಡಿ:**

**ಮಾರ್ಗದರ್ಶನಗಳು:**

1. ಕಂಪನಿಯು ತನ್ನ ಶಾಖಾ ಕಚೇರಿಯನ್ನು ಹೊಂದಿರುವ ಜಿಲ್ಲೆಗಳಿಂದ, ಸಿಎಸ್‌ಆರ್ ಅಡಿಯಲ್ಲಿ ನೆರವಿಗಾಗಿ ಆಯಾ ತಾಲ್ಲೂಕು/ವಾರ್ಡ್ ಇತ್ಯಾದಿಯಲ್ಲಿನ ಸರ್ಕಾರಿ ಶಾಲೆಗಳಿಂದ ಅರ್ಜಿಗಳು ಬಾರದಿರುವ ಸಂದರ್ಭದಲ್ಲಿ, ಪಿ.ಯು. ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಿಂದ ಬಂದಿರುವ ಅರ್ಜಿಗಳನ್ನು ಪರಿಗಣಿಸುವುದು.

2. ಬಜೆಟ್ ಮತ್ತು ಇನ್ನಿತರೆ ಮಿತಿಗಳಿರುವುದರಿಂದ, ಶಾಲೆ ಒಂದಕ್ಕೆ ಗರಿಷ್ಠ ರೂ.1.00 ಲಕ್ಷದವರೆಗೆ ಮಾತ್ರ ನೆರವನ್ನು ಒದಗಿಸುವುದಕ್ಕೆ ಮಿತಿ ನಿಗದಿಪಡಿಸುವುದು.

3. ಸಿಎಸ್‌ಆರ್ ಅಡಿಯಲ್ಲಿ ಕಂಪನಿಯು ಒದಗಿಸುತ್ತಿರುವ ನೆರವು ರಾಜ್ಯದಾದ್ಯಂತ ಒಂದೇ ಸಮನಾಗಿರುವಂತೆ ನೋಡಿಕೊಳ್ಳಲು, ಗ್ರಾಮೀಣ ಪ್ರದೇಶಗಳಾಗಿದ್ದ ಪಕ್ಷದಲ್ಲಿ ಪ್ರತಿ ತಾಲ್ಲೂಕಿನಿಂದ ಗರಿಷ್ಠ 5 ಶಾಲೆಗಳನ್ನು ಮತ್ತು ರಾಜ್ಯದ ನಗರ ಪ್ರದೇಶಗಳಾಗಿದ್ದರೆ ಪ್ರತಿ ವಾರ್ಡ್/ಕ್ಷೇತ್ರದ 5 ಶಾಲೆಗಳನ್ನು ಪರಿಗಣಿಸುವುದು.

4. ಸರ್ಕಾರದ ಸಂಸ್ಥೆಗಳಿಂದ ಬಂದ ಅರ್ಜಿಗಳನ್ನು ಸಹ ಶುದ್ಧ ಕುಡಿಯುವ ನೀರಿನ ಸಿಸ್ಟಮ್‌ಗಳಿಗೆ ಅಥವಾ ಬಾಲಕಿಯರುಗಳಿಗೆ ನೈರ್ಮಲ್ಯ ಸೌಲಭ್ಯಗಳು/ವಿಶ್ರಾಂತಿ ಕೊಠಡಿಗಳ ಸೌಲಭ್ಯ ಕಲ್ಪಿಸಲು ಅಥವಾ ಗ್ರಂಥಾಲಯ ಇತ್ಯಾದಿಗಳಿಗಾಗಿ ನೆರವು ಒದಗಿಸಲು ಪರಿಗಣಿಸುವುದು.

5. ತನ್ನ ಕಾರ್ಯಾಚರಣೆಗಳ ಪ್ರದೇಶದ ಅಡಿಯಲ್ಲಿ ಬರುವ ಶಾಲೆಗಳಿಗೆ ಅಗತ್ಯವಾದ ಪೀಠೋಪಕರಣ ಮತ್ತು ಇತರೆ ಸಂಬಂಧಪಟ್ಟ ಶೈಕ್ಷಣಿಕ ಉಪಕರಣಗಳು/ಶೈಕ್ಷಣಿಕ ಸಾಮಗ್ರಿಗಳನ್ನು ಸರಬರಾಜು ಮಾಡಲು ಡಿಎಸ್‌ಎಂಎಸ್‌ಗೆ/ಸಂಬಂಧಪಟ್ಟ ಜಿಲ್ಲಾ ಸರಬರಾಜುದಾರರುಗಳಿಗೆ ಮತ್ತು ಮಾರ್ಕೆಟಿಂಗ್ ಕೋ–ಆಪ್ ಸೊಸೈಟಿ ಲಿಮಿಟೆಡ್‌ಗೆ ಕಾಮಗಾರಿ/ಸರಬರಾಜು ಆದೇಶಗಳನ್ನು ನೀಡುವುದು.

6. ಕಂಪನಿಯ ಸಿಎಸ್‌ಆರ್ ಚಟುವಟಿಕೆಗಳ ಅಡಿಯಲ್ಲಿ ಒಳಪಡುವ ಡೆಸ್ಕ್‌ಗಳು/ಬೆಂಚುಗಳು/ ಟೇಬಲ್‌ಗಳು/ಕುರ್ಚಿಗಳು ಇತ್ಯಾದಿ ಹೊರತಾಗಿ, ಬೇರೆ ನೆರವು ಒದಗಿಸಲು ಕೋರಿಕೆ ಸಲ್ಲಿಸುವ ಸರ್ಕಾರಿ ಶಾಲೆಗಳು/ಸಂಸ್ಥೆಗಳಿಗೆ ಅಗತ್ಯವಾದ ಶೈಕ್ಷಣಿಕ ಉಪಕರಣಗಳು/ಮೂಲಸೌಲಭ್ಯ/ಶೈಕ್ಷಣಿಕ ಸಾಮಗ್ರಿಗಳನ್ನು ಸರಬರಾಜು ಮಾಡಲು/ಒದಗಿಸಲು, ಡಿಎಸ್‌ಎಂಎಸ್ ತನ್ನ ಕಚೇರಿ ಅಥವಾ ಶಾಖೆಯನ್ನು ಹೊಂದಿರದಿರುವ ಪ್ರದೇಶಗಳಲ್ಲಿ ಏಜೆನ್ಸಿ/ಅಂಗಡಿ/ಸಂಸ್ಥೆಗೆ ಕಾಮಗಾರಿ/ಸರಬರಾಜು ಆದೇಶಗಳನ್ನು ನೀಡುವುದು.

7. ಫಲಾನುಭವಿ ಸಂಸ್ಥೆಗಳಿಗೆ ಐಟಂಗಳನ್ನು ಸರಬರಾಜು ಮಾಡುವಾಗ, ಸರಬರಾಜು ಮಾಡುವ ಐಟಂಗಳ ಗುಣಮಟ್ಟದ ಬಗ್ಗೆ ಯಾವುದೇ ರಾಜಿ ಮಾಡಿಕೊಳ್ಳದೆ, ಸ್ಪರ್ಧಾತ್ಮಕ ದರಗಳಲ್ಲಿ ಸರಬರಾಜು ಮಾಡುವಂತೆ ಮತ್ತು ಗುಣಮಟ್ಟದ ಮಾನದಂಡಗಳನ್ನು ತಪ್ಪದೆ ಅನುಸರಿಸುವಂತೆ ಸಂಬಂಧಪಟ್ಟ ಡಿಎಸ್‌ಎಂಎಸ್‌ಗೆ/ಸರಬರಾಜುದಾರರಿಗೆ ಸೂಚನೆ ನೀಡುವುದು.

8. ಉತ್ತಮ ಸ್ಥಿತಿಯಲ್ಲಿ ಸರಬರಾಜು ಮಾಡಿದ ಐಟಂಗಳ ಸಂಬಂಧದಲ್ಲಿ, ಫಲಾನುಭವಿ ಸಂಸ್ಥೆಗಳಿಂದ ಕೌಂಟರ್ ಸಹಿ ಮಾಡಿದ ಮತ್ತು ದೃಢೀಕರಿಸಿದ ಬಿಲ್ಲುಗಳನ್ನು ಸಲ್ಲಿಸಿದರೆ ಮಾತ್ರ ಡಿಎಸ್‌ಎಂಎಸ್‌ಗೆ/ಏಜೆನ್ಸಿಗೆ ಹಣ ಪಾವತಿ ಮಾಡುವುದು.

9. ಕಂಪನಿಯು ಒದಗಿಸಿದ ನೆರವಿನ ಬಗ್ಗೆ ಫಲಾನುಭವಿ ಸಂಸ್ಥೆಗಳಿಂದ ಆ ಸಂಸ್ಥೆಯ ಮುಖ್ಯಸ್ಥರು ಕ್ರಮವಾಗಿ ದೃಢೀಕರಿಸಿದ ಉಪಯೋಗ ಪ್ರಮಾಣಪತ್ರ ಸಲ್ಲಿಸುವಂತೆ ಕೇಳುವುದು ಮತ್ತು ಅದನ್ನು ಪಡೆದುಕೊಳ್ಳುವುದು.

10. ಸಿಎಸ್‌ಆರ್ ಅಡಿಯಲ್ಲಿ ಒದಗಿಸಲಾದ ನೆರವನ್ನು ಸೂಕ್ತ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಲಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು, ಫಲಾನುಭವಿ ಸಂಸ್ಥೆಗಳ ಆಯ್ಕೆ

ಮಾಡಿದ/ಮಾದರಿಯ ತಪಾಸಣೆ/ಪರಿಶೀಲನೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಎಸ್ಆರ್ ಸಮಿತಿಯ ಅಧ್ಯಕ್ಷರು, ಕಂಪನಿಯ ಹಿರಿಯ ಅಧಿಕಾರಿ ಒಬ್ಬರಿಗೆ ಜವಾಬ್ದಾರಿ ವಹಿಸುವ ಮೂಲಕ ಉಸ್ತುವಾರಿ ವ್ಯವಸ್ಥೆಯನ್ನು ಮಾಡುವುದು.

**********

CLICK HERE TO RETURN